KAMD310006452024

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮದ್ದೂರು.

ಉಪಸ್ಥಿತರು ಃ- ಶ್ರೀಮತಿ. **ಪಾರ್ವತಿ ಸಿ.ಎಂ.,** ಬಿ.ಎ.ಎಲ್, ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಮದ್ದೂರು.

ದಿನಾಂಕ **01** ನೇ ಆಗಸ್ಟ್ **2026**

ಸಿ.ಸಿ ನಂಬರ್ **315/2024**

ಪಿರ್ಯಾದುದಾರರು :- ಸರ್ಕಾರದ ಪರವಾಗಿ
ಮದ್ದೂರು ಸಂಚಾರಿ ಪೊಲೀಸರು

(ಪ್ರತಿನಿಧಿಸುವವರು ಮಾನ್ಯ
ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ :- ಶಿವರಾಮ ಕೆ ಬಿನ್ ಮೂರ್ತಿ ಜಿ.ಕೆ,
44 ವರ್ಷ, ವಾಸಃ ಬೆಂಗಳೂರು ನಗರ.

(ಪ್ರತಿನಿಧಿಸುವವರು ಹೆಚ್.ಎಸ್.ಎಂ., ವಕೀಲರು)

| | |
|---|---|
| ಅಪರಾಧ ನಡೆದ ದಿನಾಂಕ | 15.12.2023 |
| ಪ್ರಕರಣ ದಾಖಲು ಮಾಡಿದ ದಿನಾಂಕ | 15.12.2023 |
| ದೂರುದಾರರ ಹೆಸರು | ಸುದರ್ಶನ್ ಕೊಠಾರಿ |
| ಸಾಕ್ಷಿದಾರರ ವಿಚಾರಣೆ ಪ್ರಾರಂಭಿಸಿದ ದಿನಾಂಕ | 13.01.2026 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 17.03.2026 |

| | |
|---|---|
| ಅಪರಾಧದ ಕಲಂಗಳು | ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) |
| ತೀರ್ಪು ಪ್ರಕಟಿಸಿದ ದಿನಾಂಕ | 01.08.2026 |

(ಶ್ರೀಮತಿ. ಪಾರ್ವತಿ ಸಿ.ಎಂ)
ಪ್ರಧಾನ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಮದ್ದೂರು.

## ತೀರ್ಪು

ಪ್ರಸ್ತುತ ತೀರ್ಪು ಮದ್ದೂರು ಸಂಚಾರಿ ಪೊಲೀಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂದು ಸಲ್ಲಿಸಿದ ಅಂತಿಮ ವರದಿಯ ಮೇಲೆ ಉದ್ಭವವಾಗಿರುತ್ತದೆ.

**2.** ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆ**,**

ದಿನಾಂಕ:15.12.2023 ರಂದು ಬೆಳಿಗ್ಗೆ 6-00 ಗಂಟೆಯ ಸಮಯದಲ್ಲಿ ಮದ್ದೂರು ಸಂಚಾರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೆಜ್ಜಲಗೆರೆ ಕಾಲೋನಿ ಹತ್ತಿರ ವಿಲಾಸಿನಿ ಲಾಡ್ಜ್ ನೇರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆ-275 ರ ಎಕ್ಸ್ ಪ್ರೆಸ್ ವೇ ರಸ್ತೆಯಲ್ಲಿ ಆರೋಪಿಯು ಕೆ.ಎ.41-ಬಿ-4480 ರ ಟೊಯೋಟಾ ಇನ್ನೋವಾ ಕಾರಿನಲ್ಲಿ ಚಾಸಾ-1 ರಿಂದ ಚಾಸಾ-6 ಮತ್ತು ಮೃತ ಅಮನ್ ಮೆಹತಾ ರವರನ್ನು ಕೂರಿಸಿಕೊಂಡು ಕಾರನ್ನು ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಅದೇ ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಯಾವುದೋ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಕಾರು ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿರುವ ತಡೆಗೋಡೆಗೆ ಡಿಕ್ಕಿಯಾಗಿ ಅಪಘಾತವಾದ ಪರಿಣಾಮ ಚಾಸಾ-1 ರಿಂದ ಸಾ-3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದು, ಅಮನ್ ಮೆಹತಾ ರವರ ತಲೆ, ಮೂಗಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಮಂಡ್ಯ ಸಿಟಿಯಲ್ಲಿರುವ ಡಿ.ಆರ್.ಎಂ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ನಗರದ ಮಹಾವೀರ ಜೈನ್ ಆಸ್ಪತ್ರೆಯ ತುರ್ತು ಚಿಕಿತ್ಸೆಯ ವಿಭಾಗದ ವೈದ್ಯಾಧಿಕಾರಿಗಳು

ಪರೀಕ್ಷಿಸಿ ಚಿಕಿತ್ಸೆ ನೀಡಿದಾಗ ಅಮನ್ ರವರು ದಾರಿ ಮಧ್ಯೆಯೇ ದಿನಾಂಕ: 15.12.2023 ರಂದು ಮಧ್ಯಾಹ್ನ 03-00 ಗಂಟೆಯಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿಯು ಮೇಲ್ಕಂಡ ಆಪಾದಿತ ಕೃತ್ಯವನ್ನು ಎಸಗಿರುತ್ತಾರೆಂಬುದು ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವಾಗಿರುತ್ತದೆ.

**3.** ಅಭಿಯೋಜನಾ ದಾಖಲಾತಿಗಳನ್ನು ಪರಿಶೀಲಿಸಿದಾಗ ಘಟನೆಗೆ ಸಂಬಂಧಿಸಿದಂತೆ ಚಾಸಾ.1 ರವರು ಚಾಸಾ.18 ರವರ ಸಮಕ್ಷಮ ದೂರನ್ನು ನೀಡಿದ ಆಧಾರದ ಮೇಲೆ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾ ಪ್ರಕ್ರಿಯೆಗಳನ್ನು ಕೈಗೊಂಡು ಅಂತಿಮವಾಗಿ ಚಾಸಾ.19 ರವರು ಆರೋಪಿಯ ವಿರುದ್ದ ಅಂತಿಮ ವರದಿಯನ್ನು ಸಲ್ಲಿಸಿರುವುದು ಗೋಚರವಾಗಿರುತ್ತದೆ.

**4.** ಅಭಿಯೋಜನಾ ದಾಖಲಾತಿಗಳನ್ನು ಸ್ವೀಕರಿಸಿದ ನಂತರ ಯಥಾಪ್ರಕಾರ ಅವುಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿರುತ್ತದೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 190 ಕ್ಲಾಸ್ (1) (ಬಿ) ರಡಿಯಲ್ಲಿ ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ರ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಳ್ಳಲಾಗಿರುತ್ತದೆ.

**5.** ಆರೋಪಿಯು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಸಮನ್ಸ್ ಗೆ ಪ್ರತಿಯಾಗಿ ಹಾಜರಾದ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ಪ್ರತ್ಯಾಯೋಜಿಸಲಾಗಿರುವಂತೆ ಅಭಿಯೋಜನಾ ದಾಖಲಾತಿಗಳ ನಕಲನ್ನು ನೀಡಲಾಗಿರುತ್ತದೆ. ಆರೋಪಿಯು ನಿರ್ದೋಷಿ ಎಂದು ಪರಿಗಣಿಸುವ ಯಾವುದೇ ಅಂಶಗಳು ಅಭಿಯೋಜನಾ ದಾಖಲಾತಿಗಳಲ್ಲಿ ಲಭ್ಯವಿಲ್ಲದಿರುವ ಕಾರಣ ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ಅವರಿಗೆ ತಿಳಿಸಿದ ಭಾಷೆಯಲ್ಲಿ ಓದಿ ವಿವರಿಸಲಾಗಿರುತ್ತದೆ. ಅರ್ಥೈಸಿಕೊಂಡ ಆರೋಪಿಯು ತಾನು ತಪ್ಪನ್ನು ಎಸಗಿರುವುದಿಲ್ಲ, ಅಧಿವಿಚಾರಣೆಯಾಗಲಿ ಎಂದು ಉತ್ತರಿಸಿದ ಪರಿಣಾಮವಾಗಿ ಪ್ರಕರಣವನ್ನು ಅಧಿವಿಚಾರಣೆಗೆ ಕಾಯ್ದಿರಿಸಲಾಗಿರುತ್ತದೆ.

**6.** ಅಭಿಯೋಜನಾ ಪಕ್ಷವು ಆರೋಪಿಯ ಮೇಲೆ ಹೊರಿಸಿರುವ ಆರೋಪವನ್ನು

ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರಿಂದ 7 ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ. ಮೇಲ್ಕಂಡ ವಿಚಾರಣಾ ಕಾಲದಲ್ಲಿ ಇಪ್ಪತ್ತನಾಲ್ಕು ದಸ್ತಾವೇಜಗಳನ್ನು ನಿಪಿ.1 ರಿಂದ ನಿಪಿ.24 ಎಂದು ನಿಶಾನೀಕರಿಸಲಾಗಿರುತ್ತದೆ.

**7.** ಅಭಿಯೋಜನೆಯ ಪ್ರಕರಣದ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯನ್ನು ಪ್ರಶ್ನಿಸಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

**8.** ಉಭಯ ಪಕ್ಷಗಾರರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಕಡತದ ಮೇಲಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದ ಪರಿಣಾಮವಾಗಿ ಪ್ರಸ್ತುತ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತದೆ.

1. ದಿನಾಂಕ:15.12.2023 ರಂದು ಬೆಳಿಗ್ಗೆ 6-00 ಗಂಟೆಯ ಸಮಯದಲ್ಲಿ ಮದ್ದೂರು ಸಂಚಾರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೆಜ್ಜಲಗೆರೆ ಕಾಲೋನಿ ಹತ್ತಿರ ವಿಲಾಸಿನಿ ಲಾಡ್ಜ್ ನೇರದಲ್ಲಿರುವ ರಾಷ್ಟ್ರೀಯ ಹೆದ್ದಾರಿ ರಸ್ತೆ-275 ರ ಎಕ್ಸ್ ಪ್ರೆಸ್ ವೇ ರಸ್ತೆಯಲ್ಲಿ ಆರೋಪಿಯು ಕೆ.ಎ.41-ಬಿ-4480 ರ ಟೊಯೋಟಾ ಇನ್ನೋವಾ ಕಾರಿನಲ್ಲಿ ಚಾಸಾ-1 ರಿಂದ ಚಾಸಾ-6 ಮತ್ತು ಮೃತ ಅಮನ್ ಮೆಹತಾ ರವರನ್ನು ಕೂರಿಸಿಕೊಂಡು ಕಾರನ್ನು ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿರುವ ಮೂಲಕ ಆರೋಪಿಯು ಭಾರತೀಯ ದಂಡ ಸಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಆರೋಪಿಯು ಕೆ.ಎ.41-ಬಿ-4480 ರ ಟೊಯೋಟಾ ಇನ್ನೋವಾ ಕಾರಿನಲ್ಲಿ ಚಾಸಾ-1 ರಿಂದ ಚಾಸಾ-6 ಮತ್ತು ಮೃತ ಅಮನ್ ಮೆಹತಾ ರವರನ್ನು ಕೂರಿಸಿಕೊಂಡು ಕಾರನ್ನು ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅದೇ ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಯಾವುದೋ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಕಾರು ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿರುವ ತಡೆಗೋಡೆಗೆ ಡಿಕ್ಕಿಯಾಗಿ ಅಪಘಾತವಾದ ಪರಿಣಾಮ ಚಾಸಾ-1 ರಿಂದ ಸಾ-3 ರವರಿಗೆ ಸಾಮಾನ್ಯ ಸ್ವರೂಪದ

ಗಾಯಗಳುಂಟಾಗಿರುವ ಮೂಲಕ ಆರೋಪಿಯು ಭಾರತೀಯ ದಂಡ ಸಹಿತೆ ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

3. ಮೇಲೆ ಹೇಳಿದ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ, ಆರೋಪಿಯು ಕೆ.ಎ.41-ಬಿ-4480 ರ ಟೊಯೋಟಾ ಇನ್ನೋವಾ ಕಾರಿನಲ್ಲಿ ಚಾಸಾ-1 ರಿಂದ ಚಾಸಾ-6 ಮತ್ತು ಮೃತ ಅಮನ್ ಮೆಹತಾ ರವರನ್ನು ಕೂರಿಸಿಕೊಂಡು ಕಾರನ್ನು ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅದೇ ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಯಾವುದೋ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಕಾರು ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿರುವ ತಡೆಗೋಡೆಗೆ ಡಿಕ್ಕಿಯಾಗಿ ಅಪಘಾತವಾದ ಪರಿಣಾಮ ಅಮನ್ ಮೆಹತಾ ರವರ ತಲೆ, ಮೂಗಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಮಂಡ್ಯ ಸಿಟಿಯಲ್ಲಿರುವ ಡಿ.ಆರ್.ಎಂ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರು ನಗರದ ಮಹಾವೀರ ಜೈನ್ ಆಸ್ಪತ್ರೆಯ ತುರ್ತು ಚಿಕಿತ್ಸೆಯ ವಿಭಾಗದ ವೈದ್ಯಾಧಿಕಾರಿಗಳು ಪರೀಕ್ಷಿಸಿ ಚಿಕಿತ್ಸೆ ನೀಡಿದಾಗ ಅಮನ್ ರವರು ದಾರಿ ಮಧ್ಯೆಯೇ ದಿನಾಂಕ: 15.12.2023 ರಂದು ಮಧ್ಯಾಹ್ನ 03-00 ಗಂಟೆಯಲ್ಲಿ ಮೃತಪಟ್ಟಿರುವ ಮೂಲಕ ಆರೋಪಿಯು ಭಾರತೀಯ ದಂಡ ಸಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾನೆಂದು ಅಭಿಯೋಜನಾ ಪಕ್ಷವು ನಿಸ್ಸಂಶಯವಾಗಿ ರುಜುವಾತು ಪಡಿಸಿರುತ್ತಾರೆಯೇ?

4. ಮಾಡುವ ಆದೇಶವೇನು ?

**9.** ಮೇಲ್ಕಂಡ ಅಂಶಗಳಿಗೆ ಸಂಬಂಧಿಸಿದಂತೆ ಅಭಿಯೋಜನಾ ಪಕ್ಷವು ಕಡತದ ಮೇಲೆ ಹಾಜರುಪಡಿಸಿರುವ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಾಮರ್ಶೆ ಮಾಡಿದೆ. ಆ ಪರಿಣಾಮವಾಗಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿರುತ್ತದೆ.

ಅಂಶ **1** ಃ- ನಕಾರಾತ್ಮಕವಾಗಿ,
ಅಂಶ **2** ಃ- ನಕಾರಾತ್ಮಕವಾಗಿ,
ಅಂಶ **3** ಃ- ನಕಾರಾತ್ಮಕವಾಗಿ,
ಅಂಶ **4** ಃ- ಅಂತಿಮ ಆದೇಶದಂತೆ, ಈ ಕೆಳಕಂಡಂತೆ,

## ಕಾರಣಗಳು

**10. ಅಂಶ. 1 ರಿಂದ 3 ಃ-** ಈ ಮೂರು ಅಂಶಗಳನ್ನು ಚರ್ಚೆಯ

ಪುನರಾವರ್ತನೆಯನ್ನು ತಪ್ಪಿಸಲು ಒಟ್ಟಿಗೆ ತೆಗೆದುಕೊಳ್ಳಲಾಗಿರುತ್ತದೆ.

**11.** ಆರೋಪಿಯು ಘಟನಾ ದಿವಸ, ಘಟನಾ ಸ್ಥಳದಲ್ಲಿ, ಘಟನಾ ಸಮಯದಲ್ಲಿ ಆಪಾದಿತ ಕೃತ್ಯಗಳನ್ನು ಎಸಗುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆಂಬುದು ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ.

**12.** ಕ್ರಿಮಿನಲ್ ಪ್ರಕ್ರಿಯಾ ತತ್ವದ ಅಡಿಯಲ್ಲಿ ಆರೋಪಿಯ ಮೇಲೆ ಹೊರಿಸಿರುವ ಆಪಾದನೆಗಳ ಎಲ್ಲಾ ಘಟಕಾಂಶಗಳನ್ನು ನಿಸ್ಸಂಶಯವಾಗಿ ರುಜುವಾತು ಪಡಿಸುವ ಹೊಣೆ ಅಭಿಯೋಜನೆಯದ್ದಾಗಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನಾ ಪಕ್ಷವು ತನ್ನ ಮೇಲಿರುವ ಪ್ರಮುಖ ಹೊಣೆಯನ್ನು ರುಜುವಾತು ಪಡಿಸುವ ನಿಟ್ಟಿನಲ್ಲಿ ಪ್ರಾಸಾ.1 ರಿಂದ 7 ರವರ ಮೌಖಿಕ ಸಾಕ್ಷ್ಯ ಹಾಗೂ ನಿಪಿ.1 ರಿಂದ 24 ರ ದಸ್ತಾವೇಜು ಸಾಕ್ಷ್ಯಗಳನ್ನು ಕಡತದ ಮೇಲೆ ತಂದಿರುತ್ತಾರೆ.

**13.** ಪ್ರಸ್ತುತ ಪ್ರಕರಣದಲ್ಲಿ ಚರ್ಚಿಸಬೇಕಾದ ಪ್ರಮುಖ ಅಂಶವೇನೆಂದರೆ ಈ ಪ್ರಕರಣವನ್ನು ಚಾಸಾ.1 ಎಸ್ ಸುದರ್ಶನ್ ಕೊಠಾರಿ ರವರು ನೀಡಿದ ಪ್ರಥಮ ವರ್ತಮಾನ ಆಧಾರದ ಮೇಲೆ ದಾಖಲು ಮಾಡಲಾಗಿರುತ್ತದೆ. ಈ ಪ್ರಕರಣದಲ್ಲಿ ಅಭಿಯೋಜನೆಯವರು ಹಾಜರು ಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಸಂಕ್ಷೇಪ್ತವಾಗಿ ಪರಿಶೀಲಿಸಿದಾಗ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಅವರು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣೆಯಲ್ಲಿ, ಮೃತ ಅಮಾನ್ ಮೆಹತಾ ನನ್ನ ಸಹೋದರ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ. ನಿಪಿ.1 ರಿಂದ 3 ಕ್ಕೆ ಸಹಿಗಳನ್ನು ಪೊಲೀಸರ ಕೋರಿಕೆಯ ಮೇರೆಗೆ ಮಾಡಿದ್ದು ಆದರೆ ಸದರಿ ದಾಖಲೆಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಫೋಟೋದಲ್ಲಿ ಇರುವುದು ನಾನೇ ಆಗಿದ್ದು, ಅವುಗಳನ್ನು ಎಲ್ಲಿ ಯಾವಾಗ ತೆಗೆಯಲಾಗಿದೆ ಎಂದು ನೆನಪಿಲ್ಲ ಎಂದು ಸಾಕ್ಷ್ಯ ನುಡಿದಿದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆದರೆ ಈ

ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಹೊರಹಾಕಲು ವಿಫಲರಾಗಿರುತ್ತಾರೆ.

**14.** ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ.2/ಪ್ರಾಸಾ.2 ಖುಷ್ಬು ಜೈನ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಅಮಾನ್ ಮೆಹತಾ ನನ್ನ ಚಿಕ್ಕಮ್ಮನ ಮಗ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆದರೆ ಈ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಹೊರಹಾಕಲು ವಿಫಲರಾಗಿರುತ್ತಾರೆ.

**15.** ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ.3/ಪ್ರಾಸಾ.3 ಮೆಹಕ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಅಮಾನ್ ಮೆಹತಾ ನನ್ನ ಚಿಕ್ಕಪ್ಪನ ಮಗ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆದರೆ ಈ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಹೊರಹಾಕಲು ವಿಫಲರಾಗಿರುತ್ತಾರೆ.

**16.** ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ.4/ಪ್ರಾಸಾ.4 ಸಲೋನಿ ಜೈನ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಅಮಾನ್ ಮೆಹತಾ ನನ್ನ ಸಹೋದರ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು

ಸಾಕ್ಷ್ಯ ನುಡಿದಿದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆದರೆ ಈ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಹೊರಹಾಕಲು ವಿಫಲರಾಗಿರುತ್ತಾರೆ.

**17.** ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ.5/ಪ್ರಾಸಾ.5 ಸಾಕ್ಷಿ ಜೈನ್ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಅಮಾನ್ ಮೆಹತಾ ನನ್ನ ಸಹೋದರ, ಸದರಿಯವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಸಾಕ್ಷ್ಯ ನುಡಿದಿದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಹಾಯಕ ಸರ್ಕಾರಿ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು. ಆದರೆ ಈ ಸಾಕ್ಷಿದಾರರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಹೊರಹಾಕಲು ವಿಫಲರಾಗಿರುತ್ತಾರೆ.

**18.** ಪ್ರಕರಣ ದಾಖಲಿಸಿಕೊಂಡು ಭಾಗಶಃ ತನಿಖೆ ಮಾಡಿದ ತನಿಖಾಧಿಕಾರಿಯಾದ ಚಾಸಾ.18/ಪ್ರಾಸಾ.6 ಮಹೇಶ್ ಜೆ ಇ, ಎ ಎಸ್ ಐ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ 18-12-2023 ರಂದು ಸಂಜೆ 4.15 ಗಂಟೆ ಸಮಯದಲ್ಲಿ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ.ಸಂಖ್ಯೆ. 163/2023 ರಂತೆ ದಾಖಲು ಮಾಡಿರುತ್ತೇನೆ. ಸದರಿ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ನಮ್ಮ ಮೇಲಾಧಿಕಾರಿಯವರಿಗೆ ನೀವೇದಿಸಿಕೊಂಡಿರುತ್ತೆನೆ. ನಂತರ ದಿ 16-12-2023 ರಂದು ಕೃತ್ಯ ನಡೆದ ಸ್ಥಳಕ್ಕೆ ಬೇಟಿ ನೀಡಿ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಪಂಚರಾದ ಚಾಸಾ-11 ಮತ್ತು ಚಾಸಾ-12 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಮಾಡಿ, ಸದರಿ ವೇಳೆಯಲ್ಲಿ ನಿಪಿ-4 ರಿಂದ 7 ಚಾಯ ಚಿತ್ರಗಳು ತೆಗೆಯಲಾಗಿದೆ. ಸದರಿ ವೇಳೆಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಸ್ಕೆಚ್ ತಯಾರಿಸಿರುತ್ತೇನೆ. ನಂತರ ಅದೇದಿನ ಠಾಣೆಯಲ್ಲಿ ಬೆಳಗ್ಗೆ 9.30-10.00 ಗಂಟೆ ಸಮಯದಲ್ಲಿ ಚಾಸಾ-1, 11, 12 ರವರ ಸಮಕ್ಷಮ ಅಪಘಾತಕ್ಕೆ ಒಳಗಾದ ಮತ್ತು ಅಪಘಾತಪಡಿಸಿದ ವಾಹನಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ-3 ರಂತೆ

ಅಮಾನತ್ತುಮಹಜರ್ ಜರುಗಿಸಿದ್ದೇನೆ. ಸದರಿ ವೇಳೆಯಲ್ಲಿ ನಿಪಿ-8 ರಿಂದ 10 ಛಾಯ ಚಿತ್ರಗಳು ತೆಗೆಯಲಾಗಿದೆ. ಚಾಸಾ-2 ರಿಂದ 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಸದರಿ ಪ್ರಕರಣದ ಮುಂದಿನ ತನಿಖೆಗಾಗಿ ಚಾಸಾ-19 ರವರಿಗೆ ಕಡತವನ್ನು ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**19.** ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುವ ತನಿಖಾಧಿಕಾರಿಯಾದ ಚಾಸಾ.19/ಪ್ರಾಸಾ.7 ಶಿವಕುಮಾರ್, ಸಿ ಪಿ ಐ ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿ 17-12-2023 ರಂದು ಈ ಕೇಸಿನ ಕಡತವನ್ನು ಚಾಸಾ-18 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ. ನಂತರ ಅದೇದಿನ ವಾಹನದ ಮಾಲೀಕರಿಗೆ ನಿಪಿ-19 ರಂತೆ ನೋಟೀಸ್ ನೀಡಿದ್ದೇನೆ. ದಿ 18-12-2023 ರಂದು ವಾಹನದ ಮಾಲೀಕರಿಂದ ನಿಪಿ-20 ರಂತೆ ಉತ್ತರ ಪಡೆದು, ನಿಪಿ-22 ರಂತೆ ಬಾಂಡ್ ಪಡೆದು ವಾಹನ ಬಿಡುಗಡೆ ಮಾಡಿದ್ದೇನೆ. ದಿ 20-12-2023 ರಂದು ನಿಪಿ-16 ಪಿಎಂ ವರದಿ ಮತ್ತು ನಿಪಿ-21 ರಂತೆ ಐಎಂವಿ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿ 07-02-2024 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ.

**20.** ಅಭಿಯೋಜನೆಯವರು ಹಾಜರುಪಡಿಸಿರುವ ಮೌಖಿಕ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ದಿನಾಂಕ:15.12.2023 ರಂದು ಬೆಳಿಗ್ಗೆ 6-00 ಗಂಟೆಯ ಸಮಯದಲ್ಲಿ ಮದ್ದೂರು ಸಂಚಾರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ರಾಷ್ಟ್ರೀಯ ಹೆದ್ದಾರಿ ರಸ್ತೆ-275 ರ ಎಕ್ಸ್ ಪ್ರೆಸ್ ವೇ ರಸ್ತೆಯಲ್ಲಿ ಆರೋಪಿಯು ಕೆ.ಎ.41-ಬಿ-4480 ರ ಟೊಯೋಟಾ ಇನ್ನೋವಾ ಕಾರಿನಲ್ಲಿ ಚಾಸಾ-1 ರಿಂದ ಚಾಸಾ-6 ಮತ್ತು ಮೃತ ಅಮನ್ ಮೆಹತಾ ರವರನ್ನು ಕೂರಿಸಿಕೊಂಡು ಕಾರನ್ನು ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಅದೇ ರಸ್ತೆಯಲ್ಲಿ ಮುಂದೆ ಹೋಗುತ್ತಿದ್ದ ಯಾವುದೋ ಲಾರಿಯ ಹಿಂಭಾಗಕ್ಕೆ ಡಿಕ್ಕಿಪಡಿಸಿದ್ದರಿಂದ ಕಾರು ನಿಯಂತ್ರಣ ತಪ್ಪಿ ರಸ್ತೆಯ ಎಡಭಾಗದಲ್ಲಿರುವ ತಡೆಗೋಡೆಗೆ ಡಿಕ್ಕಿಯಾಗಿ ಅಪಘಾತವಾದ ಪರಿಣಾಮ ಚಾಸಾ-1 ರಿಂದ ಸಾ-3 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದು, ಅಮನ್ ಮೆಹತಾ ರವರ ತಲೆ, ಮೂಗಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು, ಚಿಕಿತ್ಸೆಗಾಗಿ ಮಂಡ್ಯ ಸಿಟಿಯಲ್ಲಿರುವ ಡಿ.ಆರ್.ಎಂ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ

ಬೆಂಗಳೂರು ನಗರದ ಮಹಾವೀರ ಜೈನ್ ಆಸ್ಪತ್ರೆಯ ತುರ್ತು ಚಿಕಿತ್ಸೆಯ ವಿಭಾಗದ ವೈದ್ಯಾಧಿಕಾರಿಗಳು ಪರೀಕ್ಷಿಸಿ ಚಿಕಿತ್ಸೆ ನೀಡಿದಾಗ ಅಮನ್ ರವರು ದಾರಿ ಮಧ್ಯೆಯೇ ದಿನಾಂಕ: 15.12.2023 ರಂದು ಮಧ್ಯಾಹ್ನ 03-00 ಗಂಟೆಯಲ್ಲಿ ಮೃತಪಟ್ಟಿರುತ್ತಾರೆಂಬುದು ಅಭಿಯೋಜನೆಯ ಸ್ಪಷ್ಟ ನಿಲುವಾಗಿರುತ್ತದೆ. ಆದರೆ ಚಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ತನಗೆ ಗೊತ್ತಿಲ್ಲ. ತಾನು ಪೊಲೀಸರಿಗೆ ಯಾವುದೇ ದೂರು ನೀಡಿಲ್ಲ ಎಂದು ಅಭಿಯೋಜನಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮತ್ತು ಈ ಪ್ರಕರಣದ ಪ್ರತ್ಯಕ್ಷ ಹಾಗೂ ಗಾಯಾಳು ಸಾಕ್ಷಿದಾರರಾದ ಚಾಸಾ.2 ರಿಂದ 5 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸದರಿ ಅಪಘಾತ ಹೇಗೆ ಯಾರಿಂದ ಎಲ್ಲಿ ಯಾವಾಗ ಆಗಿದೆ ಎಂದು ತಮಗೆ ಗೊತ್ತಿಲ್ಲ. ತಾವುಗಳು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಮತ್ತು ತಾವುಗಳು ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ಅಭಿಯೋಜನಗೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಹಾಗೂ ಈ ಪ್ರಕರಣದ ಸ್ಥಳ ಮಹಜರ್ ಸಾಕ್ಷಿದಾರರನ್ನು ಅಭಿಯೋಜನೆಯವರು ವಿಚಾರಣೆ ಮಾಡಲು ವಿಫಲರಾಗಿರುತ್ತಾರೆ. ಈ ಪ್ರಕರಣದಲ್ಲಿ ಆರೋಪಿಯ ಅಜಾಗರೂಕತೆಯಿಂದ ಸದರಿ ಅಪಘಾತವಾಗಿದೆ ಎಂದು ರುಜುವಾತುಪಡಿಸಲು ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ಆರಕ್ಷಕ ಸಾಕ್ಷಿದಾರರಾದ ಚಾಸಾ.18 ಮತ್ತು 19 ರವರು ಮಾತ್ರ ಅಭಿಯೋಜನೆಗೆ ಪೂರಕವಾಗುವಂತೆ ಸಾಕ್ಷ್ಯ ನುಡಿದಿರುತ್ತಾರೆ. ಕೇವಲ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯವನ್ನು ಪರಿಗಣಿಸಿ ಆರೋಪಿ ತಪ್ಪಿತಸ್ಥ ಎಂದು ಪರಿಗಣಿಸಲು ಸಾಧ್ಯವಿಲ್ಲ. ಆದ್ದರಿಂದ ಆರೋಪಿಯ ನಿರ್ಲಕ್ಷತನದಿಂದಲೇ ಈ ಅಪಘಾತವಾಗಿರುತ್ತದೆ ಎಂದು ರುಜುವಾತುಪಡಿಸುವಲ್ಲಿ ಅಭಿಯೋಜನೆಯವರು ವಿಫಲರಾಗಿರುತ್ತಾರೆ. ಆದ್ದರಿಂದ ಅಭಿಯೋಜನೆಯವರು ಆರೋಪಿಯ ವಿರುದ್ಧದ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿರುವುದರಿಂದ ಆರೋಪಿಯ ಮೇಲೆ ಮಾಡಿದ ದೋಷಾರೋಪಣೆಗಳಿಂದ ಆರೋಪಿಯನ್ನು ದೋಷಮುಕ್ತಿಗೊಳಿಸಿ ಬಿಡುಗಡೆಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು, ಅಂಶ.1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

**21.** <u>ಅಂಶ 4</u> **:-** 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿರುವ ಕಾರಣಗಳಿಗಾಗಿ ಅಭಿಯೋಜನಾ ಪಕ್ಷದವರು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ವಿಫಲರಾದ ಕಾರಣ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 248(1)ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ) ರ ಆಪಾದನೆಗಳಿಗಾಗಿ ಆರೋಪಿಯನ್ನು ನಿರ್ದೋಷಿ ಎಂದು ನಿರ್ಣಯಿಸಿ ಖುಲಾಸೆಗೊಳಿಸಲಾಗಿದೆ.

ಆರೋಪಿ ಮತ್ತು ಅವರ ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿನ ಬಾಂಡು ಮತ್ತು ಮುಚ್ಚಳಿಕೆಯು ದಂಡ ಪ್ರಕ್ರಿಯಾ ಸಂಹಿತೆ ಕಲಂ **437** (ಎ) ರಡಿಯಲ್ಲಿ **6** ತಿಂಗಳವರೆಗೆ ಜಾರಿಯಲ್ಲಿರುತ್ತದೆ.

(ತೀರ್ಪನ್ನು ಶೀಘ್ರಲಿಪಿಗಾರನಿಗೆ ಉಕ್ತಲೇಖನ ನೀಡಿ, ಅವರು ಲಿಪ್ಯಂತರಿಸಿ, ಗಣಕೀಕೃತವಾದ ನಂತರ ತಿದ್ದುಪಡಿ ಮಾಡಿ, ತೆರೆದ ನ್ಯಾಯಾಲಯದಲ್ಲಿ ದಿನಾಂಕ **01** ನೇ ಆಗಸ್ಟ್ **2026** ರಂದು ಘೋಷಿಸಲಾಯಿತು)

(ಶ್ರೀಮತಿ. ಪಾರ್ವತಿ ಸಿ.ಎಂ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.

### :: ಅನುಸೂಚಿ ::

ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

| | | |
|---|---|---|
| ಪ್ರಾ.ಸಾ.1 | : | ಎಸ್ ಸುದರ್ಶನ್ ಕೊಠಾರಿ |
| ಪ್ರಾ.ಸಾ.2 | : | ಖುಷ್ಬು ಜೈನ್ |
| ಪ್ರಾ.ಸಾ.3 | : | ಮೆಹಕ್ |
| ಪ್ರಾ.ಸಾ.4 | : | ಸಲೋನಿ ಜೈನ್ |
| ಪ್ರಾ.ಸಾ.5 | : | ಸಾಕ್ಷಿ ಜೈನ್ |
| ಪ್ರಾ.ಸಾ.6 | : | ಮಹೇಶ್ ಜೆ ಇ |
| ಪ್ರಾ.ಸಾ.7 | : | ಶಿವಕುಮಾರ್ |

ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

| | | |
|---|---|---|
| ನಿ.ಪಿ. 1 | : | ದೂರು |
| ನಿ.ಪಿ. 1(ಎ,ಬಿ) | : | ಸಹಿಗಳು |
| ನಿ.ಪಿ. 2 | : | ಸ್ಥಳ ಮಹಜರ್ |
| ನಿ.ಪಿ. 2(ಎ,ಬಿ) | : | ಸಹಿಗಳು |

| | | |
|---|---|---|
| ನಿ.ಪಿ. 3 | : | ಅಮಾನತ್ತು ಮಹಜರ್ |
| ನಿ.ಪಿ. 3(ಎ,ಬಿ) | : | ಸಹಿಗಳು |
| ನಿ.ಪಿ. 4 ರಿಂದ 10 | : | ಫೋಟೋಗಳು |
| ನಿ.ಪಿ. 11 | : | ಪ್ರಾಸಾ.2 ರವರ ಹೇಳಿಕೆ |
| ನಿ.ಪಿ. 12 | : | ಪ್ರಾಸಾ.3 ರವರ ಹೇಳಿಕೆ |
| ನಿ.ಪಿ. 13 | : | ಪ್ರಾಸಾ.4 ರವರ ಹೇಳಿಕೆ |
| ನಿ.ಪಿ. 14 | : | ಪ್ರಾಸಾ.5 ರವರ ಹೇಳಿಕೆ |
| ನಿ.ಪಿ. 15 | : | ಶವ ತನಿಖಾ ವರದಿ |
| ನಿ.ಪಿ. 16 | : | ಶವ ಪರೀಕ್ಷೆಯ ವರದಿ |
| ನಿ.ಪಿ. 16(ಎ) | : | ಸಹಿ |
| ನಿ.ಪಿ. 17 ಮತ್ತು 18 | : | ಎಂ ಎಲ್ ಸಿ ರಿಜಿಸ್ಟರ್ ಗಳು |
| ನಿ.ಪಿ. 19 | : | ಕಲಂ 133 ರೀತ್ಯಾ ನೋಟೀಸ್ |
| ನಿ.ಪಿ. 19(ಎ) | : | ಸಹಿ |
| ನಿ.ಪಿ. 20 | : | ನೋಟಿಸ್ ಗೆ ಪ್ರತ್ಯುತ್ತರ |
| ನಿ.ಪಿ. 20(ಎ) | : | ಸಹಿ |
| ನಿ.ಪಿ. 21 | : | ಐ ಎಂ ವಿ ವರದಿ |
| ನಿ.ಪಿ. 21(ಎ) | : | ಸಹಿ |
| ನಿ.ಪಿ. 22 | : | ಇಂಡಿಮಿನಿಟಿ ಬಾಂಡ್ |
| ನಿ.ಪಿ. 22(ಎ) | : | ಸಹಿ |
| ನಿ.ಪಿ. 23 | : | ಪ್ರ ವ ವರದಿ |
| ನಿ.ಪಿ. 23(ಎ) | : | ಸಹಿ |
| ನಿ.ಪಿ. 24 | : | ಕಚ್ಚಾ ನಕ್ಷೆ |
| ನಿ.ಪಿ. 24(ಎ) | : | ಸಹಿ |

ಆರೋಪಿಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ

--ಇಲ್ಲ--

ಆರೋಪಿಯ ಪರ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

--ಇಲ್ಲ--

ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲುಗಳ ಪಟ್ಟಿ

--ಇಲ್ಲ--

**(ಶ್ರೀಮತಿ. ಪಾರ್ವತಿ ಸಿ.ಎಂ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು.